ಮೂಲ ದಾವಾ ನಂ. 29/2022

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 15-12-2022 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್. ವಿ. ಎನ್. ವಕೀಲರಿಂದಃ**

ಪಾಟೀ ಸವಾಲು ಇಲ್ಲ ಎಂದು ಹೇಳಿದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ ಶ್ರೀ ಎಮ್. ಡಿ. ಆರ್. ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಅಫಿಡವಿಟ್‌ನಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿದೆ. ಮುಖ್ಯ ವಿಚಾರಣೆಯ ಅಫಿಡವಿಟ್ ತಯಾರಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ಈ ದಾವೆ ದಾಖಲಿಸುವ ಪೂರ್ವದಲ್ಲಿ ನಾನು 8 ನೇ ಪ್ರತಿವಾದಿಗೆ ಯಾವುದೇ ನೋಟಿಸ್ ಕೊಟ್ಟಿರುವುದಿಲ್ಲ. ಸಾಕ್ಷಿಗೆ ಒಂದು ನೋಟಿಸನ್ನು ತೋರಿಸಲಾಗಿ ಸದ್ರಿ ನೋಟಿಸನ್ನು ನಾನೇ ಕೊಟ್ಟಿರುವುದಾಗಿ ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಸದ್ರಿ ನೋಟಿಸಿಗೆ ಯಾರೂ ಕೂಡಾ ಪ್ರತ್ಯುತ್ತರವನ್ನು ನೀಡಿರುವುದಿಲ್ಲ. ಸದ್ರಿ ನೋಟಿಸಿನಲ್ಲಿ ಮಾವಿನಕೂರ್ವಾ ಹೋಬಳಿಯ ಮಹಿಮೆ ಗ್ರಾಮದ ಸರ್ವೆ ನಂ. 1 ರಲ್ಲಿ 1 ಎಕರೆ 17 ಗುಂಟೆ, ಸರ್ವೆ ನಂ. 208 ರಲ್ಲಿ 3-02-04, ಸರ್ವೆ ನಂ. 201 ರಲ್ಲಿ 2-31-08 ಹಾಗೂ ಸರ್ವೆ ನಂ. 209 ರಲ್ಲಿ 1-12-04 ಆಸ್ತಿಗಳಲ್ಲಿ ನನಗೆ 2/3 ಹಕ್ಕು ಇದೆ ಎಂದು ನಾನು ನೋಟಿಸಿನಲ್ಲಿ ಬರೆಸಿರುವುದಿಲ್ಲ. ಸದ್ರಿ ನೋಟಿಸಿಗೆ ಎದುರುದಾರರು ಉತ್ತರ ಕೊಟ್ಟಿದ್ದಾರಾ ಇಲ್ಲವಾ ಎಂದು ನಾನು ವಕೀಲರನ್ನು ವಿಚಾರಿಸಿರುವುದಿಲ್ಲ. ನಾನು 8 ನೇ ಪ್ರತಿವಾದಿಯ ಹಕ್ಕನ್ನು ಕಸಿಯುವ ಉದ್ದೇಶದಿಂದ ಸದ್ರಿ ನೋಟಿಸ್ ಕೊಟ್ಟಿದ್ದು, ಸದ್ರಿ ನೋಟಿಸ್ ಕೊಟ್ಟ ವಿಚಾರವನ್ನು ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿದ್ದೆ ಎಂದರೆ ಸರಿಯಲ್ಲ.

ನಾನು ಹುಟ್ಟಿದಾಗಿನಿಂದಲೂ ಮುರುಡೇಶ್ವರದಲ್ಲಿ ವಾಸಿಸುತ್ತಿದ್ದೇನೆ. ನಾನು ವಾಸಿಸುತ್ತಿರುವ ಮನೆಯ ಸಂಖ್ಯೆ ನೆನಪಿಲ್ಲ. ಸಾಕ್ಷಿ ಮುಂದುವರಿದು ಅದಕ್ಕೆ 500 ಸಂಖ್ಯೆ ಇರಬಹುದು ಎಂದು ನುಡಿಯುತ್ತಾರೆ. ಸದ್ರಿ ಮನೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದ್ರಿ ಮನೆ ಇರುವ ಜಾಗದ ಸರ್ವೆ ನಂಬರ ನನಗೆ ಗೊತ್ತಿಲ್ಲ. ಈಗ ನಾನು ಮುರುಡೇಶ್ವರದಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಮುರುಡೇಶ್ವರದಲ್ಲಿ ಜಮೀನಿನ ಬಾಜಾರು ಮೌಲ್ಯ ಎಕರೆಗೆ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ನಾನು 26.07.1986 ರಲ್ಲಿ ಜನಿಸಿರುತ್ತೇನೆ. 2 ನೇ ವಾದಿಯ ಹುಟ್ಟಿದ ದಿನಾಂಕ ನೆನಪಿಲ್ಲ . ಸಾಕ್ಷಿ ಮುಂದುವರಿದು ಅವರು 1987 ರಲ್ಲಿ ಹುಟ್ಟಿರಬಹುದು ಎಂದು ನುಡಿಯುತ್ತಾರೆ. ನನ್ನ ತಂದೆ 1999 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮೂಲತಃ ಮುರುಡೇಶ್ವರದವರಾಗಿರುತ್ತಾರೆ. ನನ್ನ ತಂದೆ ಹೆಸರಿಗೆ ನಾನು ವಾಸಿಸುತ್ತಿರುವ ಮನೆ ಬಿಟ್ಟು ಬೇರೆ ಆಸ್ತಿಗಳು ಇದ್ದವು ಎಂದರೆ ಸಾಕ್ಷಿ ಅನೇಕ ಆಸ್ತಿಗಳು ಇದ್ದವು ನಿರ್ದಿಷ್ಟವಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಅಂದಾಜು ಎಷ್ಟು ಎಕರೆ ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ಆಸ್ತಿಗಳು ವಿಭಾಗದ ಮೂಲಕ ಬಂದಿದ್ದವು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ 2015 ನೇ ಇಸವಿಯಲ್ಲಿ ಮೃತಪಟ್ಟಿರುತ್ತಾಳೆ. ನನ್ನ ತಂದೆಯ ಹೆಸರಿನಲ್ಲಿದ್ದ ಆಸ್ತಿಗಳನ್ನು ನಾನು ಮಾರಾಟ ಮಾಡಿರುವುದಿಲ್ಲ. ಸಾಕ್ಷಿ ಮುಂದುವರಿದು ಆಸ್ತಿಗಳು ಇದ್ದದ್ದು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಆಸ್ತಿಗಳ ಬಗ್ಗೆ ವಾರಿಸಾ ಮಾಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮೃತಪಟ್ಟಾಗ ನನ್ನ ತಾಯಿಗೆ ವ್ಯವಹಾರಿಕ ಜ್ಞಾನ ಇತ್ತು ಎಂದರೆ ಸರಿ .

ನನ್ನ ತಾಯಿಯ ತಾಯಿ ಜಿಮ್ಮಾಬಿ ಕೊಂ ಬಾಬಾಸಾಬ 2008 ರಲ್ಲಿ ಮೃತಪಟ್ಟಿರುತ್ತಾರೆ. ಅವರು ಮೃತಪಡುವಾಗ ದಾವಾ ಆಸ್ತಿಗಳನ್ನು ಹೊರತುಪಡಿಸಿ ಅವರಿಗೆ ಯಾವುದೇ ಬೇರೆ ಆಸ್ತಿಗಳು ಇರಲಿಲ್ಲ. ಅವರಿಗೆ ವಾಸ್ತವ್ಯದ

ಮನೆ ಮತ್ತು ಭಾಗಾಹಿತು ಜಮೀನು ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. 9 ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಾಗ ಭಾಗಾಹಿತು ಆಗಿರುವುದಿಲ್ಲ. ಸಾಕ್ಷಿ ಮುಂದುವರಿದು ಅದರಲ್ಲಿ ರಸ್ತೆ ಮತ್ತು ಮನೆ ಇದೆ ಎಂದು ನುಡಿಯುತ್ತಾರೆ. ಅದನ್ನು ಹೊರತುಪಡಿಸಿ ಬೇರೆ ಜಾಗದಲ್ಲಿ ಭಾಗಾಹಿತು ಜಮೀನು ಇದೆ ಎಂದರೆ ಸರಿ . ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳನ್ನು ನಾನು ಮತ್ತು 2 ನೇ ವಾದಿ ಸೇರಿ ಸಂಗ್ರಹಿಸಿರುತ್ತೇವೆ. 2 ನೇ ವಾದಿ ಈಗ ಸೌದಿಯಲ್ಲಿ ಇದ್ದಾರೆ. ಈ ದಾವಾ ದಾಖಲಾದ ಮೇಲೆ ಅವರು ಸೌದಿಗೆ ಹೋಗಿರುತ್ತಾರೆ. ವಂಶಾವಳಿ ದಾಖಲೆಯನ್ನು ನಾನೇ ಅರ್ಜಿ ಕೊಟ್ಟು ಮಾಡಿಸಿರುತ್ತೇನೆ. ಸದ್ರಿ ಅರ್ಜಿಯ ಜೊತೆಗೆ ನನ್ನ ತಂದೆ ತಾಯಿಯ ಮರಣ ಪ್ರಮಾಣ ಪತ್ರ, ನನ್ನ , 2 ನೇ ವಾದಿಯ ಮತ್ತು ನನ್ನ ಅಕ್ಕನ ಆಧಾರ ಕಾರ್ಡಿನ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ನಮ್ಮ ಆಧಾರ ಕಾರ್ಡಿನಲ್ಲಿ ನಮ್ಮ ತಾಯಿಯ ಹೆಸರು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆಧಾರ ಕಾರ್ಡಿನಲ್ಲಿ ತಂದೆಯ ಹೆಸರು ಇದೆ ಎಂದು ನುಡಿಯುತ್ತಾರೆ. ನಾನು ಸದ್ರಿ ಅರ್ಜಿಯ ಜೊತೆಗೆ ಅಫಿಡಾವಿಟ್ ಕೂಡಾ ಕೊಟ್ಟಿರುತ್ತೇನೆ. ಮೇಲೆ ಹೇಳಿದ ದಾಖಲೆಗಳನ್ನು ಬಿಟ್ಟರೆ ಬೇರೆ ದಾಖಲೆಯನ್ನು ಇಲಾಖೆಯವರು ಕೇಳಿದ್ದು ಇಲ್ಲ ಮತ್ತು ನಾನು ಕೊಟ್ಟಿದ್ದು ಇಲ್ಲ ಎಂದರೆ ಸರಿ . ನನ್ನ ಮತ್ತು 2 ನೇ ವಾದಿಯ ಜನ್ಮ ದಾಖಲೆ ಮತ್ತು ಶಾಲಾ ವರ್ಗಾವಣೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಅದೇ ರೀತಿ ನನ್ನ ತಾಯಿ ಮತ್ತು ತಂದೆಯ ಮದುವೆಯ ಕುರಿತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನನ್ನ ತಾಯಿ ಜಿಮ್ಮಾಬಿ ಕೊಂ ಬಾಬಾಸಾಬರವರ ಮಗಳ ಕುರಿತು ದಾಖಲೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಆ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. 8 ನೇ ಪ್ರತಿವಾದಿ ನನ್ನ ಸಹೋದರಿ ಎಂದು ತೋರಿಸಲು ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ವಂಶವೃಕ್ಷವನ್ನು ಬಿಟ್ಟು ಬೇರೆ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. 8 ನೇ ಪ್ರತಿವಾದಿ ನಮ್ಮ ಜೊತೆ ಯಾವತ್ತೂ ವಾಸ್ತವ್ಯ ಇಲ್ಲ ಎಂದರೆ ಸಾಕ್ಷಿ ಮುಂಚೆ ಇದ್ದರು ಈಗ ವಾಸ್ತವ್ಯ ಇಲ್ಲ ಎಂದು ನುಡಿಯುತ್ತಾರೆ. 8 ನೇ ಪ್ರತಿವಾದಿ ಆಕೆಯ ಮದುವೆಯಾಗುವ ಪೂರ್ವದಲ್ಲಿ ನನ್ನ ತಾಯಿಯ ತಾಯಿಯ ಜೊತೆ ವಾಸ್ತವ್ಯ ಇದ್ದು ಅವರ ದೇಕರೇಕಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

8 ಮತ್ತು 1 ರಿಂದ 7 ನೇ ಪ್ರತಿವಾದಿಯರು ಅವರ ಮದ್ಯೆ ಕುಟುಂಬದ ವ್ಯವಸ್ಥಾ ಪತ್ರ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ವ್ಯವಸ್ಥಾ ಪತ್ರದ ಪ್ರಕಾರ 9 ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಾಗ 8 ನೇ ಪ್ರತಿವಾದಿಯ ಭಾಗಕ್ಕೆ ಬಂದಿತ್ತು ಎಂದರೆ ಸಾಕ್ಷಿ ಸದ್ರಿ ವ್ಯವಸ್ಥಾ ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದ್ರಿ ಜಾಗ ಈಗ 9 ನೇ ಪ್ರತಿವಾದಿಯ ಕಬ್ಜಾ ಮತ್ತು ವಹಿವಾಟಿನಲ್ಲಿದೆ ಎಂದರೆ ಸರಿಯಲ್ಲ. ಈಗ ನಾನು ವಾಸ್ತವ್ಯ ಮಾಡುತ್ತಿರುವ ಮನೆಯ ನಂಬರ್ ನನಗೆ ನೆನಪಿಲ್ಲ. 9 ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಾಗದಲ್ಲಿ ನಾನು ಬಲಾತ್ಕಾರವಾಗಿ ಮನೆ ಕಟ್ಟಲು ಹೋದಾಗ ಪಂಚಾಯತಿಯವರು ನನಗೆ ನೋಟಿಸ್ ಕೊಟ್ಟಿದ್ದಾರೆ ಎಂದರ ಸರಿಯಲ್ಲ. ಸಾಕ್ಷಿ ಮುಂದುವರಿದು ಪಂಚಾಯತಿಯವರು ಉಪ್ಪೋಣಿ ಗ್ರಾಮ ಎಂದು ನೋಟಿಸ್ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ಜಾಗಕ್ಕೆ ಪಂಚಾಯತಿಯವರು ನಂಬರ್ ಕೊಟ್ಟಿಲ್ಲ ಎಂದರೆ ಸಾಕ್ಷಿ ಅದು ಕೃಷಿ ಜಮೀನು ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.